Reg No- B G 155 22-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಪ್ಲೇವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತೆಲಂಗಾಣ ಚಳುವಳಿ ಮತ್ತೆ ಆರಂಭ

ಭಾರತದ ಅತ್ಯಂತ ಐಶ್ವರ್ಯವಂತ

ನವದೆಹಲಿ— 1967–69 ರಲ್ಲಿ ಭಾರತದ ಅತ್ಯಂತ ಐಶ್ವರ್ಯವ್ಯಕ್ತಿಯು ಗೋವಾದ ಕೈಗಾರಿಕೋದ್ಯಮಿ ಶ್ರೀ ವಿ ಡಿ ಚೌಗುಲಾ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು – ರೂ. 1 ಕೋಟಿಗಿಂತ ಹೆಚ್ಚು ಸಂಪತ್ತುಳ್ಳವರು 24 ಮಂದಿ ಎಂದೂ ತಿಳಿಸಲಾಯಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿ ಯವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಉದಾರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಗಿರುವಂತೆಯೆ ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ. ಮೈಸೂರು 4.

ಪ್ರತಿಬಂಧಕ ಉಲ್ಲಂಘನೆ

ನವದೆಹಲಿ— ಸೆಕ್ಷನ್ 144 ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜ ಹಿಡಿದು ಘೋಷಣೆಮಾಡುತ್ತಾ ಪಾರ್ಲಿಮೆಂಟು ಭವನದ ಕಡೆ ಬಂದ 10 ಎಸ್ಪಿಪಿ ಸ್ವಯಂ ಸೇವಕರನ್ನು ಪೋಲೀಸರು ಬಂಧಿಸಿದರು.

●

ಗಗನಯಾನಿಗಳಿಗೆ ಅಭಿನಂದನೆ

ನವದೆಹಲಿ— ಲೋಕಸಭೆಯಲ್ಲಿ ಅಮೇರಿಕಾ ಗಗನಯಾನಿಗಳಿಗೆ ಜಯಘೋಷ ಮಾಡಲಾಯಿತು ಪ್ರಧಾನಿಗಳು ಅವರ ಚಂದ್ರನನ್ನು ತಲುಪಿದ ಅದ್ಭುತ ಸಾಹಸಕ್ಕಾಗಿ ಅಮೇರಿಕಾ ಸರಕಾರ ಮತ್ತು ಜನತೆಯನ್ನು ಅಭಿನಂದಿಸಿದರು.

★

ಪೋಸ್ಟ್‌ಮಾಸ್ಟರಿನ ಆತಹತ್ಯ

ಕೋಲಾರ— ವೊಕ್ಕಲೇರಿ ಪೋಸ್ಟಾಫೀಸಿದ ಪೋಸ್ಟ್‌ಮಾಸ್ಟರು ಕೃಷ್ಣಪ್ಪನೆಂಬಾತನು ಪೋಸ್ಟಲ್ ಇನ್‌ಸ್ಪೆಕ್ಟರು ಬಂದುದನ್ನು ಕಂಡು ತಾವು ಮನೆಗೆ ಹೋಗಿ ಬರುವುದಾಗಿ ತಿಳಿಸಿ, ಮನೆಯಲ್ಲಿ ವಿಷಸೇವಿಸಿ ಸತ್ತುದು ಕಂಡುಬಂದಿತು – ತನಿಖೆ ನಂತರ ಆಫೀಸು ಹಣದಲ್ಲಿ ಕೊರತೆಯಾಗಿದ್ದುದು ಪತ್ತೆಯಾಯಿತು.

★

ಅಮೇರಿಕಾ ಗಗನಯಾನಿಗಳು

ಹೌಸ್ಟ್— ಭಾನುವಾರ ಚಂದ್ರನಲ್ಲಿ ಕಾಲಿಟ್ಟ ಅಮೇರಿಕಾ ಗಗನಯಾನಿಗಳು ತಮ್ಮ ರಾಷ್ಟ್ರಧ್ವಜ ಎತ್ತಿ, ಭೂಮಿಗೆ 240000 ಮೈಲಿ ದೂರದಿಂದ ತಮ್ಮ ಅಧ್ಯಕ್ಷರೊಂದಿಗೆ ಮಾತಾಡಿದರು – ಅಲ್ಲಿದ ಕಲ್ಲು ಮಣ್ಣು ಮೊದಲಾದ್ದನ್ನು ಶೇಖರಿಸಿ ವಾಪಸ್ಸು ಪ್ರಯಾಣ ಹೊರಟರು.

★

ತೆಲಂಗಾಣಾ ಚಳವಳಿ

ಹೈದರಾಬಾದು— ಒಂದು ತಿಂಗಳ ನಂತರ ಮತ್ತೆ ತೆಲಂಗಾಣಾ ಚಳವಳಿ ಆರಂಭವಾಯಿತು – ಹುಡುಗಿಯರ ಗುಂಪು ಜವಹರಲಾಲ್‌ರ ರಸ್ತೆಯಲ್ಲಿ ಕುಳಿತು ಸಂಚಾರಕ್ಕೆ ಅಡ್ಡಿಪಡಿಸಿದರು : ಮಹಿಳಾ ಪೋಲೀಸರು ಅವರನ್ನು ಟ್ರಕ್‌ನಲ್ಲಿ ಅಲ್ಲಿಂದ ಸಾಗಿಸಿದರು – ಒಂದು ಆರ್ ಟಿ ಸಿ ಬಸ್ಸನ್ನು ಸುಡಲಾಯಿತು - ಜೋಡಿನಗರದಲ್ಲಿ 39 ಮಂದಿ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಲಾಯಿತು.

★

ಆಪೊಲೊ ತಂದ ಅದಷ್ಟ

ಲಂಡನ್— 1971 ರ ಜನವರಿ 1 ಕ್ಕೆ ಮುಂಚೆ ಮಾನವನು ಚಂದ್ರನಲ್ಲಿ ಕಾಲಿಡುವನೆಂದು ಬುಕ್‌ಮೇಕರರ ಹತ್ತಿರ 1 ಕ್ಕೆ 10 ರಂತೆ 10 ಪೌಂಡಿಗೆ ಸ್ವಲ್ಪ ಹೆಚ್ಚಾಗಿ 1464 ರಲ್ಲಿ ಬಾಜೀ ಕಟ್ಟಿದ್ದ ಡೇವಿಡ್ ಫೆಫಾಲ್ ಬ್ರಿಟಿಷ್ ಟೆಲಿವಿರ್ಜನಲ್ಲಿ 24000 ಡಾಲರು ಕೊಡಲಾಯಿತು.

★

ಲೆಬಾನೀಸಿನ 40 ವರ್ಷದ ಗೃಹಿಣಿ ರಿಸ್ಕಾ ಸಾಲಿಯ್ ತನ್ನ ಈಗಿನ 11 ನೇ ಮಗುವಿಗೆ ಅಪೊಲೋ 11 ಎಂದು ಹೆಸರಿಟ್ಟರುವಳು – ಟೆಲಿವಿಜನ್ನಿನಲ್ಲಿ ಚಂದ್ರಯಾನ ನೋಡಿದ ನೆನಪಿಗಾಗಿ ಹೀಗೆ ಹೆಸರಿಸಿಕೊಂಡಳು.

★

ಅಕ್ಕಿ ವಶ

ಮೈಸೂರು— ಕೇರಳಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ರೂ. 25000 ಬೆಲೆಯ 16ಗ ಕ್ವಿಂಟಾಲ್ ಅಕ್ಕಿಯು ಬಾವಲಿಗಡಿ ಪೋಸ್ಟಿನ ಹತ್ತಿರ ವಶಪಡಿಸಿಕೊಳ್ಳಲಾಯಿತು.

ಅಕ್ರಮಿತ ಭೂಮಿ ಹಂಚಿಕೆ

ಕೊಯಮತ್ತೂರು— ಆಂಧ್ರದ ಪಣತ ಚೆರ್ಲಾ ಗಾಮದಲ್ಲಿನ 3500 ಎಕ್ರೆ ಭೂಮಿಯನ್ನು ಮುಂದಿನ 10 ದಿನಗಳಲ್ಲಿ ಕಮ್ಯೂ ನಿಸ್ಟ್ ಕಾರ್ಯಕರ್ತರಿಂದ ಭೂಮಿ ಇಲ್ಲದವರಿಗೆ ಹಂಚಲಾಗುವದೆಂದು ಕ್ರಾಂತಿ ಕಮ್ಯೂನಿಸ್ಟು ಪಾರ್ಟಿ ನಾಯಕ ಶ್ರೀ ನಾಗಾರೆಡ್ಡಿ ಹೇಳಿದರು.

★

ಬ್ಯಾಂಕು ರಾಷ್ಟ್ರೀಕರಣ

ನವದೆಹಲಿ— ಬ್ಯಾಂಕು ರಾಷ್ಟ್ರೀಕರಣ ವಿರೋಧಿಸಿ ನಿನ್ನೆ ಸುಪ್ರೀಂ ಕೋರ್ಟಿನಲ್ಲಿ ಹಾಕಲಾದ ರಿಟ್ ಅರ್ಜಿ ಮತ್ತು ತಡೆ ಆಜ್ಞೆ ಅರ್ಜಿ ಇಂದು ಅಡ್ಮಿಟ್ ಆಗಿ ತಡೆ ಆಜ್ಞೆ ಕೊಡಲಾಯಿತು.

★

ಕೂಡ್ಲಿಸ್ವಾಮಿಯವರ ಖುಲಾಸೆ ವಿರುದ್ಧ ಅಪೀಲು

ಬೆಂಗಳೂರು— ಕೂಡ್ಲಿಶೃಂಗೇರಿ ಸ್ವಾಮಿಗಳು ಮತ್ತಿತರರು ರೂ. 10 ಫೋಟೊ ನೋಟುಗಳ ಪ್ರಕರಣದಲ್ಲಿ ಸೆಷನ್ ಜಡ್ಜರಿಂದ ಬಿಡುಗಡೆ ಮಾಡಲ್ಪಟ್ಟಿರುವುದರ ವಿರುದ್ಧ ಸರಕಾರವು ಹೈಕೋರ್ಟಿನಲ್ಲಿ ಅಪೀಲು ಮಾಡಿದೆ.

★

ಇಂಗ್ಲೀಷು ಐಚ್ಛಿಕ

ಮೈಸೂರು— ವಿಶ್ವವಿದ್ಯಾಲಯದಲ್ಲಿ ಎಲ್ಲ ಹಂತಗಳಲ್ಲೂ ಇಂಗ್ಲೀಷು ವ್ಯಾಸಂಗವು ಐಚ್ಛಿಕವಾಗಿರುವಂತೆ ಅಕಾಡಮಿಕ್ ಕೌನ್ಸಿಲ್ ಮಾಡಿರುವ ನಿರ್ಧಾರವನ್ನು ಉಪ ಕುಲಪತಿಯವರು ಒಪ್ಪಿರುವರು.

ಉಪಾಧ್ಯಾಯರಿಲ್ಲದೆ ಸೂಲು ಮುಚ್ಚಿದೆ

ಕಂರವಾರ— ಸದಾಶಿವಘಡದ ಪ್ರಾಥಮಿಕ ಮರಾಟಿ ಹುಡುಗಿಯರ ಸ್ಕೂಲು ಉಪಾಧ್ಯಾಯರಿಲ್ಲದೆ ಅನೇಕ ತಿಂಗಳಿಂದ ಮುಚ್ಚಲ್ಪಟ್ಟಿದೆ.

ಚೀಣಾ ಏಜೆಂಟರ ಕಾರ್ಯ

ಬಿಹಾರಿದ ಪೂರ್ಣಿಯಾ ಜಿಲ್ಲೆಯ ಗಡಿ ಭಾಗಗಳಲ್ಲಿ ಚೀಣಾ ಏಜೆಂಟರು ಫೋಟೊ ನಾಣ್ಯಗಳ ಚಲಾವಣೆ ನಡೆಸುತ್ತಿರುವರೆಂದು ಹೇಳಲಾಗಿದೆ.

ಪ್ರಾಣಾರ್ಪಣೆ

ರೊಮೇನಿಯಾಕ್ಕೆ ಅಮೇರಿಕಾ ಅಧ್ಯಕ್ಷ ನಿಕ್ಸನ್ನರು ಬರುವದನ್ನು ಪ್ರತಿಭಟಿಸಿ ಬುಖಾರೆಸ್ಟಿನಲ್ಲಿ ಪಲವು ದಿನಗಳ ಹಿಂದೆ 56 ವರ್ಷದ ಒಬ್ಬ ಕಮ್ಯುನಿಸ್ಟನು ಸುಟ್ಟುಕೊಂಡನು.

ವಿಗ್ರಹಗಳ ಪತ್ತೆ

ತಂಜಾವೂರು ಜಿಲ್ಲೆಯ ಪಿಂಗಗಾಡುವಿನ, ಶಿವ ಮತ್ತು ಮಾರಮ್ಮ ದೇವಾಲಯಗಳಲ್ಲಿದ್ದ ಮಾರಮ್ಮ, ದೈವನಾ, ಸೋಮಸ್ಕಂದರ್ ವಿಗ್ರಹಗಳನ್ನು ಪೋಲೀಸರು ಪತ್ತೆಮಾಡಿ, ಈ ಸಂದರ್ಭದಲ್ಲಿ ಇಬ್ಬರನ್ನು ದಸ್ತಗಿರಿ ಮಾಡಿದ್ದಾರೆ : ಇವು ಚೋಳ ಕಾಲದವಾಗಿದ್ದು, ರೂ 1 ಲಕ್ಷ ಬಾಳತಕ್ಕವಾಗಿವೆ.

ಉಪಾಧ್ಯಾಯ ಕಾರ್ಮಿಕನಾಗಿರುವದು

ತಿರುಚಿ— ತಮಿಳುನಾಡುವಿನ ಒಬ್ಬ ಪ್ರೌಢವಿದ್ಯಾ ತರಬೇತಾಗಿರುವ ಒಬ್ಬ ಉಪಾಧ್ಯಾಯನು, ಉಪಾಧ್ಯಾಯ ಕೆಲಸ ಸಿಕ್ಕದೆ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಕಾರ್ಮಿಕನಾಗಿ ಕೆಲಸನೂಡುತ್ತಿರುವನು.

ಭಾರತಕ್ಕೆ ವಹಿಸಲಾಗಿದೆ

ಕ್ರಿಕೆಟ್ ಆಟವನ್ನು ಸಿಲೋನು ಮತ್ತು ಪೂರ್ವ ಆಫ್ರಿಕಾಗಳಲ್ಲಿ ಜನಪ್ರಿಯ ಮಾಡುವ ಕಾರ್ಯವನ್ನು ಭಾರತ ಕ್ರಿಕೆಟ್ ಕಂಟ್ರೋಲ್ ಬೋರ್ಡಿಗೆ, ಕಳೆದ ತಿಂಗಳು ಲಂಡನ್ನಿನಲ್ಲಿ ನಡೆದ ಅಂತರರಾಷ್ಟ್ರೀಯ ಕ್ರಿಕೆಟ್ ಸಮ್ಮೇಳನವು ವಹಿಸಿದೆ.

ಆಚಾರ್ಯ ತುಳಸಿಯವರ ಅಭಿಪ್ರಾಯ

ಬೆಂಗಳೂರು— ಭಾರತದ ನೈಜವಾದ ಸಾಂಸ್ಕೃತಿಯು ದಕ್ಷಿಣದಲ್ಲಿ ಕಾಣಬರುತ್ತಿದೆ ಎಂದು ಅವರಿಗಿತ್ತ ಬಹಿರಂಗ ಸ್ವಾಗತದಲ್ಲಿ ಹೇಳಿದರು : ನಾನು ಭಾರತೀಯರನ್ನು ಭಾರತೀಯರಾಗಿ, ವಿಶೇಷತಃ ಮಾನವರನ್ನಾಗಿ ಕಾಣಬೇಕೆಂದೂ ಹೇಳಿದರು.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ಜಯಪ್ರದ 3 ನೇ ವಾರ

ವುಡ್‌ಲ್ಯಾಂಡ್ಸ್

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯನೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿರಾತ್

ಸಂಗೀತ — ರೋರ್ಷ

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್
ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಅಪೆರಾ— ಅನೋಖ 2 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4